ದಿಃ 26-09-2024 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣೀಕರಿಸಲಾಯಿತು.

ಪಾಟೀ ಸವಾಲು ಶ್ರೀ. ಎನ್.ವಿ ವಾದಿ ಪರ ವಕೀಲರಿಂದಃ

ಆಸ್ತಿಗಳಲ್ಲಿ ಭಾಗ ಬರಬೇಕೆಂದು ವಾದಿಯು ಈ ದಾವೆಯನ್ನು ಹೂಡಿದ್ದಾರೆ. ವಾದಿಯು ಈ ದಾವೆಯನ್ನು ಗೋವಿಂದಪ್ಪ ಮತ್ತು ಕೃಷ್ಣಪ್ಪರವರ ವಿರುದ್ಧ ಹೂಡಿರುತ್ತಾರೆ. ವಾದಿ ಮತ್ತು ಪ್ರತಿವಾದಿಗಳು ದೊಡ್ಡ ನರಸಿಂಹಪ್ಪರವರ ಮಕ್ಕಳು. ಈ ದಾವೆಯನ್ನು ಹೂಡಿದ ಇಸವಿಯಲ್ಲಿ ದೊಡ್ಡನರಸಿಂಹಪ್ಪರವರಿಗೆ ವಾದಿ ಮತ್ತು ಪ್ರತಿವಾದಿಗಳು 3 ಜನರು ವಾರಸುದಾರರಾಗಿದ್ದರು ಎಂದರೆ ಸರಿ. 1 ನೇ ಪ್ರತಿವಾದಿಯು ಭಾರತೀಯ ಸೇನೆಯಲ್ಲಿದ್ದಾಗ ಯಾವ ದಾಖಲೆಯನ್ನು ಬರೆದುಕೊಟ್ಟಿದ್ದಾರೆ ಎಂಬುದು ನನಗೆ ಗೊತ್ತಿಲ್ಲ. 2 ನೇ ಪ್ರತಿವಾದಿಯ ಹೆಂಡತಿ ಯಾವ ದಿನಾಂಕದಂದು ತೀರಿಕೊಂಡರು ಎಂಬುದು ನನಗೆ ಗೊತ್ತಿಲ್ಲ. ಸಾಕ್ಷಿಯು ಮುಂದುವರೆದು 2 ನೇ ಪ್ರತಿವಾದಿಯ ಹೆಂಡತಿಯೇ ದಾವಾ ಐಟಂ ನಂ.1 ರಲ್ಲಿ ವ್ಯವಸಾಯ ಮಾಡುತ್ತಿದ್ದರು ಎಂದು ನುಡಿಯುತ್ತಾರೆ.

ವಾದಿ ಮತ್ತು ಪ್ರತಿವಾದಿಗಳು ನನ್ನ ಸಂಬಂಧಿಕರಲ್ಲ. ನಾನು ವ್ಯವಸಾಯ ಮಾಡುತ್ತೇನೆ ಎಂದರೆ ಸರಿ. ದಾವಾ ಐಟಂ ನಂ.1 ರ ಅಕ್ಕಪಕ್ಕದಲ್ಲಿ ನನ್ನ ಜಮೀನು ಇರುವುದಿಲ್ಲ. 2 ನೇ ಪ್ರತಿವಾದಿಯು ನನ್ನ ಗೆಳೆಯ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು 2 ನೇ ಪ್ರತಿವಾದಿಯು ನನ್ನ ಊರಿನವರು ಎಂದು ನುಡಿಯುತ್ತಾರೆ. 2 ನೇ ಪ್ರತಿವಾದಿಯೊಂದಿಗೆ ನಾನು ಲೇವಾದೇವಿಯ ವ್ಯವಹಾರವನ್ನು ಇಟ್ಟುಕೊಂಡಿಲ್ಲ. ದ್ವಾರಗಾನಹಳ್ಳಿಯಲ್ಲಿ ನನಗೆ ಸೇರಿದ ಜಮೀನುಗಳಿವೆ ಎಂದರೆ ಸರಿ. ಸದರಿ ಜಮೀನುಗಳ ಸರ್ವೆ ನಂಬರ್ ಗಳು ನನಗೆ ಗೊತ್ತಿಲ್ಲ. ಸರ್ಕಾರದಿಂದ ಜಮೀನನ್ನು ಮಂಜೂರು ಮಾಡುವ ಕ್ರಮಗಳ ಬಗ್ಗೆ ನನಗೆ ಮಾಹಿತಿ ಇರುವುದಿಲ್ಲ. ವಾದಿಯೊಂದಿಗೆ ನಾನು ಜಗಳವಾಡಿರುವುದಿಲ್ಲ. ದಾವಾ ಐಟಂ ನಂ.1 ಕ್ಕೆ ಸಂಬಂಧಪಟ್ಟ ದಾಖಲೆಗಳನ್ನು ನಾನು ನೋಡಿರುವುದಿಲ್ಲ. ನನಗೆ ದಾವಾ ಆಸ್ತಿಗಳಿಗೆ ಸಂಬಂಧಪಟ್ಟ ವಿಚಾರಗಳು ಗೊತ್ತಿಲ್ಲದಿದ್ದರೂ 2 ನೇ ಪ್ರತಿವಾದಿಗೆ ಅನುಕೂಲವಾಗಲಿ ಎಂದು ಸುಳ್ಳು ಪ್ರಮಾಣ ಪತ್ರವನ್ನು ಸಲ್ಲಿಸಿ ನ್ಯಾಯಾಲಯದ ಮುಂದೆ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರುವಿಚಾರಣೆ ಇರುವುದಿಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು).

ಓ.ಹೇ.ಕೇ.ಸ. ಇದೆ

ಸಹಿ/-

ಪ್ರ.ಸಿ.ನ್ಯಾ.ಮತ್ತು ಜೆಎಂಎಫ್‌ಸಿ,

ಗೌರಿಬಿದನೂರು